# ಮ್ಯೂಚುವಲ್ ಫಂಡ್

## ಲಾಭ-ವೈವಿಧ್ಯದ ಸುರಕ್ಷಿತ ಹುಂಡಿ

**ಷೇರುಪೇಟೆಯ ಏರಿಳಿತಗಳಿಂದ ಪಾರಾಗುವುದರ ಜೊತೆಗೆ, ಹೂಡಿಕೆಯಲ್ಲಿ ವೈವಿಧ್ಯವೂ ಇರಲಿ ಎಂದು ಬಯಸುವವರಿಗೆ ಮ್ಯೂಚುವಲ್ ಫಂಡ್‌ಗಳು ಉತ್ತಮ ಆಯ್ಕೆ.**

**■ ವಿಜಯ್ ಜೋಷಿ**



‘ಕಷ್ಟಪಟ್ಟು ದುಡಿದು ಸಂಪಾದಿಸಿದ ಹಣವನ್ನು ಹೂಡಿಕೆ ಮಾಡಬೇಕು. ಆದರೆ, ಹೂಡಿಕೆಗಳು ಒಂದೇ ಕಡೆ ಇರದಂತೆ ನೋಡಿಕೊಳ್ಳಬೇಕು. ಹೂಡಿಕೆಗೆ ಮೀಸಲಾಗಿರುವ ಹಣವು ಬೇರೆ ಬೇರೆ ಕಡೆ ವಿನಿಯೋಗ ಆಗಿರಬೇಕು’ ಎಂಬುದು ಅನುಭವಿಗಳ ಮಾತು. ಹಾಗೆಯೇ, ಸಾಂಪ್ರದಾಯಿಕ ಹೂಡಿಕೆಗಳಿಗಿಂತ ಹೆಚ್ಚಿನ ಲಾಭವನ್ನು ತಂದುಕೊಡುವ ಶಕ್ತಿ ಇರುವುದು ಈಕ್ವಿಟಿ ಹೂಡಿಕೆಗಳಿಗೆ ಮಾತ್ರ ಎಂಬುದೂ ಅನುಭವಜನ್ಯವೇ ಹೌದು. ಕಂಪನಿಯ ಆರ್ಥಿಕ ಸಾಮರ್ಥ್ಯದ ಬಗ್ಗೆ ಹೆಚ್ಚಿನ ಅರಿವು ಇಲ್ಲದೆಯೂ, ಆ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡಿ ಅಲ್ಪ ಕಾಲದಲ್ಲಿಯೇ ದೊಡ್ಡ ಮಟ್ಟದ ಲಾಭ ಕಂಡ ಉದಾಹರಣೆಗಳು ಸಾಕಷ್ಟಿವೆ. ಆದರೆ, ಹೀಗೆ ದೊಡ್ಡ ಮಟ್ಟದಲ್ಲಿ ಲಾಭ ಮಾಡಿಕೊಳ್ಳುವ ಸಾಧ್ಯತೆ ಎಲ್ಲ ಕಾಲದಲ್ಲಿಯೂ ಒಂದೇ ಬಗೆಯಲ್ಲಿ ಇರುತ್ತದೆಯೇ? ಖಂಡಿತ ಇಲ್ಲ. ಇವತ್ತು ಲಾಭ ತಂದುಕೊಟ್ಟ ಕಂಪನಿಯ ಷೇರು, ನಾಳೆ ಹಠಾತ್ತನೆ ಕುಸಿಯಬಹುದು. ಆಗ ಹೂಡಿಕೆದಾರನ ಅಸಲು ಕೂಡ ಕರಗಬಹುದು. ಸಣ್ಣ ಹೂಡಿಕೆದಾರರಲ್ಲಿ ಹೆಚ್ಚಿನವರು ತಮ್ಮ ಅಸಲು ಮೊತ್ತವೂ ನಷ್ಟವಾಗುವ ಪರಿಸ್ಥಿತಿಯನ್ನು ತಾಳಿಕೊಳ್ಳುವ ಆರ್ಥಿಕ ಶಕ್ತಿ ಹೊಂದಿರುವುದಿಲ್ಲ.

ಒಂದೇ ಕಂಪನಿಯ ಷೇರಿನಲ್ಲಿ ಹೂಡಿಕೆ ಏಕೆ? ನೂರೆಂಟು ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಬಹುದಲ್ಲ? ಆಗ ಒಂದು ಕಂಪನಿಯಲ್ಲಿನ ಹೂಡಿಕೆ ಕುಸಿದರೂ, ಇನ್ನೊಂದು ಕಂಪನಿಯಲ್ಲಿನ ಹೂಡಿಕೆ ಲಾಭದ ಕಡೆ ಮುಖ ಮಾಡಬಹುದು. ಹೂಡಿಕೆಗೆ ಬಳಸಿರುವ ಅಸಲು ಹಣವು ಆಗ ಹೆಚ್ಚು ಸುರಕ್ಷಿತವಾಗಿ ಇರುತ್ತದೆಯಲ್ಲವೇ ಎಂದು ಯಾರಾದರೂ ಆಲೋಚಿಸಬಹುದು. ಆದರೆ, ನೂರೆಂಟು ಕಂಪನಿಗಳ ಆರ್ಥಿಕ ಜಾತಕವನ್ನು ಓದಿಕೊಂಡು, ಅವುಗಳು ಮುಂದೆ ಯಾವ ಬಗೆಯಲ್ಲಿ ಏರಿಳಿತ ಕಾಣಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಎಲ್ಲರಿಂದಲೂ ಆಗದ ಕೆಲಸ. ಎಲ್ಲರಿಗೂ ಅಷ್ಟೊಂದು ಸಮಯ ಇರುವುದೂ ಇಲ್ಲ. ಜನಸಾಮಾನ್ಯರ ಇಂತಹ ಸಮಸ್ಯೆಗಳಿಗೆ ಪರಿಹಾರದ ರೂಪದಲ್ಲಿ ಹುಟ್ಟಿಕೊಂಡಿದ್ದೇ ಮ್ಯೂಚುವಲ್ ಫಂಡ್‌ಗಳು. ‘ಹೂಡಿಕೆಗಳಲ್ಲಿ ವೈವಿಧ್ಯ ಇರಲಿ’ ಎನ್ನುವ ಮಾತು ಮ್ಯೂಚುವಲ್ ಫಂಡ್‌ಗಳ ಮೂಲಕ ಕ್ರಿಯಾರೂಪದಲ್ಲಿ ಬಂದಿದೆ.

ದೇಶದ ಪ್ರಮುಖ, ಬಲಾಢ್ಯ, ಬೃಹತ್ ಪ್ರಮಾಣದ ಹಾಗೂ ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇರುವ ಕೆಲವು ಕಂಪನಿಗಳ ಷೇರುಗಳನ್ನು ‘ಬ್ಲೂ ಚಿಪ್ ಷೇರುಗಳು’ ಎಂದು ಕರೆಯುವುದಿದೆ. ಇಂತಹ ಕಂಪನಿಗಳ ಷೇರುಗಳನ್ನು ನೇರವಾಗಿ ಖರೀದಿಸಿ, ಡಿ–ಮ್ಯಾಟ್ ಖಾತೆಯಲ್ಲಿ ಇರಿಸಿಕೊಳ್ಳುವುದಕ್ಕೆ ಹೆಚ್ಚಿನ ಲೆಕ್ಕಾಚಾರ ಅಥವಾ ಅಧ್ಯಯನದ ಅಗತ್ಯ ಇಲ್ಲ. ಆದರೆ, ಲಾಭ ಸಿಗುವ ಸಾಧ್ಯತೆ ದೊಡ್ಡ ಮಟ್ಟದಲ್ಲಿ ಇರುವ ಹಾಗೂ ನಷ್ಟವಾಗಬಹುದಾದ ಸಾಧ್ಯತೆಯೂ ದೊಡ್ಡ ಮಟ್ಟದಲ್ಲಿಯೇ ಇರುವ ಸ್ಮಾಲ್ ಕ್ಯಾಪ್ ಕಂಪನಿಗಳ (ಸಣ್ಣ ಪ್ರಮಾಣದ ಕಂಪನಿಗಳು) ಷೇರುಗಳಲ್ಲಿ ಹೂಡಿಕೆ ಮಾಡುವುದು ಎಲ್ಲರಿಗೂ ಸುಲಭ ಅಲ್ಲ. ಸಣ್ಣ ಕಂಪನಿಗಳ ವಹಿವಾಟು, ಅವುಗಳ ಹಣಕಾಸಿನ ಸ್ಥಿತಿಯನ್ನೆಲ್ಲ ಆಳವಾಗಿ ಅಧ್ಯಯನ ಮಾಡಲು ಸಣ್ಣ ಹೂಡಿಕೆದಾರರಿಗೆ ಹಲವು ಸಂದರ್ಭಗಳಲ್ಲಿ ಅಗತ್ಯ ಮಾಹಿತಿ ಸಿಗದಿರುವ ಸಾಧ್ಯತೆಯೂ ಇರುತ್ತದೆ. ಸಣ್ಣ ಹೂಡಿಕೆದಾರರ ಈ ಮಿತಿಗೆ ಪರಿಹಾರ ರೂಪದಲ್ಲಿ ಕಾಣಿಸುತ್ತವೆ ಮ್ಯೂಚುವಲ್ ಫಂಡ್‌ಗಳು. ಸಣ್ಣ ಕಂಪನಿಗಳಲ್ಲಿಯೇ ಹೂಡಿಕೆ ಮಾಡುವ ಮ್ಯೂಚುವಲ್ ಫಂಡ್‌ಗಳು ಹಣಕಾಸು ಉತ್ಪನ್ನಗಳ ಮಾರುಕಟ್ಟೆಯಲ್ಲಿ ಹಲವು ಇವೆ. ಇಂತಹ ಫಂಡ್‌ಗಳ ನಿರ್ವಾಹಕರು ನೂರಾರು ಸಣ್ಣ ಕಂಪನಿಗಳ ಆರ್ಥಿಕ ಪೂರ್ವಾಪರಗಳನ್ನು